ಇ) ಬೀದರ್ ಜಿಲ್ಲೆಯ ಔರಾದ್, ಹುಮ್ನಾಬಾದ್, ಬೀದರ್, ಬಸವಕಲ್ಯಾಣ ತಾಲ್ಲೂಕು ಗಳಲ್ಲಿ ಒಟ್ಟು ೧೩೪ ತಾಂಡಗಳ ವಿದ್ಯುದ್ದೀಕರಣಕ್ಕೆ ಮಂಜೂರಾತಿ ಸಿಕ್ಕಿದೆ. ಹಾಲಿ ಹುಮ್ನಾಬಾದ್ ತಾಲ್ಲೂಕಿನಲ್ಲಿ ೩೩ ತಾಂಡಗಳು ಮತ್ತು ಬೀದರ್ ತಾಲ್ಲೂಕಿನಲ್ಲಿ ೫೫ ತಾಂಡಗಳ ವಿದ್ಯುದ್ದೀಕರಣ ಕಾರ್ಯ ಪ್ರಗತಿಯಲ್ಲಿದ್ದು, ಬಸವ ಕಲ್ಯಾಣ ತಾಲ್ಲೂಕಿನಲ್ಲಿ ೨ ತಾಂಡಗಳ ವಿದ್ಯುದ್ದೀಕರಣ ಈಗಾಗಲೇ ಆಗಿದೆ. ೧೯೮೭-೮೮ರಲ್ಲಿ ಈ ಜಿಲ್ಲೆಯಲ್ಲಿ ೭೧ ತಾಂಡಗಳ ವಿದ್ಯುದ್ದೀಕರಣದ ಗುರಿ ಇದೆ. ಜಿಲ್ಲೆಯಲ್ಲಿ ಬಾಕಿ ಇರುವ ಎಲ್ಲಾ ತಾಂಡಗಳನ್ನು ಇನ್ನು ಎರಡು ವರ್ಷಗಳಲ್ಲಿ ವಿದ್ಯುದ್ದೀಕರಣಗೊಳಿಸುವ ಗುರಿ ಇದೆ.

ಶ್ರೀ ಬಸವರಾಜ ಪಾಟೀಲ್.—೧೯೮೭-೮೮ನೇ ಸಾಲಿನಲ್ಲಿ ೭೧ ತಾಂಡಗಳ ವಿದ್ಯುದೀಕರಣದ ಗುರಿ ಇದೆ ಎಂದು ಹೇಳಿದ್ದೀರಿ. ಆ ಕಾರ್ಯವನ್ನು ಸರ್ಕಾರ ಯಾವಾಗ ಪ್ರಾರಂಭ ಮಾಡುತ್ತದೆ ?

ಶ್ರೀ ಜೆ. ಹೆಚ್. ಪಟೇಲ್.—ಪ್ರತಿವರ್ಷ ನಾವು ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿಯವರಿಗೆ ಟಾರ್ಗೆಟ್ ಇಟ್ಟುಕೊಂಡು ಕಳುಹಿಸುತ್ತೆವೆ, ಕೆಲಸ ಪ್ರಾರಂಭವಾಗುವುದು ಮಾರ್ಚ್‌ನಿಂದ. ೧೯೮೭-೮೮ರ ಕೆಲಸ ಶುರುವಾಗಿದೆ. ಮುಂದಿನ ವರ್ಷ ಮಾರ್ಚ್‌ನಿಂದ ೭೧ ತಾಂಡಗಳ ಕೆಲಸವನ್ನು ಶುರು ಮಾಡುತ್ತಾರೆ.

ಶ್ರೀ ಬಸವರಾಜ ಪಾಟೀಲ್.—ಆ ೭೧ ತಾಂಡಾಗಳ ಹೆಸರಿನ ಪಟ್ಟಿ ಇದೆಯೆ ?

ಶ್ರೀ ಜೆ. ಹೆಚ್. ಪಟೇಲ್.—ಈಗ ನನ್ನ ಹತ್ತಿರ ಇಲ್ಲ, ಆಮೇಲೆ ಕಳುಹಿಸಿ ಕೊಡುತ್ತೇನೆ.

ಶ್ರೀ ಬಸವರಾಜ ಪಾಟೀಲ್.—ಆಯಿತು. ೧೩೪ ತಾಂಡಾಗಳದ್ದು ವಿದ್ಯುದೀಕರಣವಾಗಿದೆ ಎಂದು ಹೇಳಿದ್ದೀರಿ. ಅದರ ಪಟ್ಟಿಯನ್ನೂ ಅಂದರೆ ಯಾವ್ಯಾವ ತಾಂಡಾಗಳಿಗೆ ಎಲ್ಲೆಲ್ಲಿ ವಿದ್ಯುತ್‌ನ್ನು ಒದಗಿಸಲಾಗಿದೆ ಎಂಬ ಪಟ್ಟಿಯನ್ನು ಒದಗಿಸಿದರೆ ಒಳ್ಳೆಯದು. ಹಾಗೂ ಇನ್ನೂ ಯಾವ ಯಾವ ತಾಂಡಾಗಳಿಗೆ ಎಲ್ಲೆಲ್ಲಿ ವಿದ್ಯುತ್ ಒದಗಿಸಬೇಕಾಗಿದೆ ಎಂಬ ಪಟ್ಟಿಯನ್ನು ಕೊಡುತ್ತೀರಾ ?

ಶ್ರೀ ಜೆ. ಹೆಚ್, ಪಟೇಲ್.—ಔರಾದ್ ತಾಲ್ಲೂಕಿನಲ್ಲಿ ೭೪ ತಾಂಡಗಳಿಗೆ, ಬೀದರ್ ತಾಲ್ಲೂಕಿನಲ್ಲಿ ೧೪ ತಾಂಡಾಗಳಿಗೆ, ಹುಮ್ನಾಬಾದ್ ತಾಲ್ಲೂಕಿನಲ್ಲಿ ೧೧ ತಾಂಡಾಗಳಿಗೆ ಬಸವ ಕಲ್ಯಾಣ ತಾಲ್ಲೂಕಿನಲ್ಲಿ ೩೩ ತಾಂಡಾಗಳಿಗೆ, ಭಾಲ್ಕಿಯಲ್ಲಿ ೨೦ ತಾಂಡಾಗಳಿಗೆ ಹೀಗೆ ಒಟ್ಟು ೧೩೨ ತಾಂಡಗಳಿಗೆ ವಿದ್ಯುತ್ತನ್ನು ಒದಗಿಸ ಬೇಕಾಗಿದೆ. ಆ ೧೩೨ನ್ನು ನಮ್ಮ ಕ್ಯೂಮಿ ಗೆ ಕಳುಹಿಸಿಕೊಟ್ಟಿದ್ದೇವೆ. ಅವುಗಳ ಹೆಸರು ಬೇಕೆಂದರೆ ಆ ಪಟ್ಟಿಯನ್ನು ನಂತರ ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ.

ಕರ್ನಾಟಕ ವಿದ್ಯುತ್ ಮಂಡಳಿಯವರಿಂದ ವಿದ್ಯುತ್ ದರದ ಹೆಚ್ಚಳ

೬೯ (೧೫೦) ಶ್ರೀ ರೋಶನ್‌ಬೇಗ್ (ಶಿವಾಜಿನಗರ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಹಾಗೂ ವಿದ್ಯುತ್‌ಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸು ವರೇ:—

ಅ) ಪ್ರತಿ ವರ್ಗದ ಗ್ರಾಹಕರಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಪರಿಷ್ಕರಿಸಿದ ವಿದ್ಯುತ್ ದರಗಳ ವಿವರ (ಹಿಂದಿನ ಮತ್ತು ಪರಿಷ್ಕೃತ ವಿದ್ಯುತ್ ದರಗಳನ್ನು ಎ. ಇ. ಹೆಚ್ ಮತ್ತು ಲೋ ಟೆನ್ಷನ್ ಸೇರಿ ಪ್ರತಿ ವರ್ಗದ ಬಳಕೆದಾರರೂ ಸೇರಿದಂತೆ ವಿವರ ಒದಗಿಸುವುದು) ?

ಆ) ಪರಿಷ್ಕೃತ ಟ್ಯಾರಿಫ್ ವಿರುದ್ಧ ಸಾರ್ವಜನಿಕರು ಆಂದೋಳನ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಪರಿಷ್ಕೃತ ಟ್ಯಾರಿಫನ್ನು ರದ್ದುಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮ ವೇನು ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಸಚಿವರು).—

ಅ) ವಿವರಗಳನ್ನು ಅನುಬಂಧದಲ್ಲಿ ಕೊಟ್ಟಿದೆ.

ಆ) ಕೆಲವು ಸಾರ್ವಜನಿಕರಿಂದ ಪ್ರತಿಭಟನೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಎಲೆಕ್ಟ್ರಿಸಿಟಿ ಆಕ್ಟ್ ಪ್ರಕಾರ ಮಂಡಳಿಯು ತನ್ನ ಬಂಡವಾಳದ ಮೇಲೆ ಶೇಕಡ ೩ ರಷ್ಟು ಹೆಚ್ಚುವರಿ ಗಳಿಸಬೇಕು, ಮಂಡಳಿ ಖರೀದಿಸುವ ವಿದ್ಯುಚ್ಛಕ್ತಿ ಬೆಲೆಯಲ್ಲಿ ಏರಿಕೆ, ಸಾಮಾನುಗಳ ದರದಲ್ಲಿನ ಏರಿಕೆ ರೈಲ್ವೆ ಸಾಗಾಣಿಕೆ ದರ ಸಂಬಳ ಮುಂತಾದವುಗಳಲ್ಲಿ ಏರಿಕೆಯಿಂದಾಗಿ ಟ್ಯಾರಿಫನ್ನು ಪರಿಷ್ಕರಿಸುವುದು ಅಗತ್ಯವಾಯಿತು. ಹೀಗೆ ಈ ಏರಿಕೆಯು ಅನಿವಾರ್ಯವಾದ್ದರಿಂದ ಅದನ್ನು ರದ್ದು ಗೊಳಿಸಲು ಸಾಧ್ಯವಿಲ್ಲ.

ANNE

Karnataka

REPLIES STARRED QUESTION No. 150

The details of Old Tariff rate and

Old Tariff Schedule	Revised Tariff Schedule	Category of consumers	
1	2	3	
HT-1A	HT-1	Puplic Water Supply & Sewerage Pumping installation	Demand charges plus Energy charges.
HT-18 CD exceeds 25000 KVA	HT-2	Industrial, Non-Industrial and Commercial purposes,	Demand charges plus Energy charges.
HT-182 CD below 25000 KVA	,,	-do-	Demand charges plus Energy charges.
HT-2	HT-3	Irrigation and Agricultural form	Demand charges plus Energey charges.
HT-3	HT-4	Rural Electric Co-Operative Societies	Demand charges Energy charges
IT-1	IT-1	Non-Commercial Lights and Fans etc.	(a) Bhagyjyothi installations.
			(b) Others
			Fixed chargee plus Energy charges
HT-4	HT-5	Temporary power supply.	Demand charges plus Energy charges.
			(a) For bonafide
IT-2	IT-2	Non-commercial combined Lighting and heating,	Fixed charges plus

XURE

El ctricity Board

OF SRI. ROSHAN BAIG (SHIVAJINAGAR)

Revised Tariff rate are indicated below :

Old Tariff Rate Schedule	Revised tariff rate schedule
4	5
Rs.35/- per KVA p.m. 43 Ps per unit	Rs, 40/- per KVA per Month, 55 paise per unit.
Rs. 35/- per KVA p.m. 45 Paise per unit Rs. 35/- per KVA p.m. 50 paise per unit	Rs- 40/- per KVA p.m. 80 Paise per unit
Rs. 35/- per KVA p.m. 50 paise per unit	Rs. 35/- per KVA p-m. 30 paise per unit
Nil 15 paise per unit	Nil 30 Paise per unit
Rs. 2.11 per installation per month.	Rs. 2.50 per installation per month.
Rs. 3/- p.m. 40 paise per unit	Rs. 3/- p.m. 45 Ps. for first units 60 paise for the rest
Rs. 60/- per KVA p.m. 75 paise per unit for all units.	Rs. 60/- per KVA p.m. 100 Paise per unit for all units.
private dwellings :	
Rs. 2.50 per KV of sanctioned load subject to a minimum of Rs. 10/- per installation month.	Rs. 2.50 per KW of sanctioned load subject to a minimum of Rs. 10/- per installation month.

1	2	3	
			Energy charges
			(b) for bonafide
			Fixed charges
			Energy charges
			Lighting & Motive
IT-3	IT-3	Commercial non-Industrial Lights, Fans, Heating Motive Power.	(a) Fixed charges
			Energy charges
			Heating only (a) Fixed charges Energy charges.
			Old Tariff rate
IT-4	IT-4	I-P. Sets, Agricul-ural Operations using the I.P. Set motor, poultry Farm Water supply and Sewerage pumping,	(a) For irrigation (i) upto 5 HP (ii) 5 HP and upto 10 HP (iii) Above 10 HP
			EnergyaChges ;

4	5
35 paise per unit for the first 300 units & 65 paise for the excess.	60 paise per unit for the first 250 units & 80 paise for the excess.
Hostels :	
Rs. 2.50 per KW of sanctioned load p.m. subject to a minimum Rs. 10/- per installation/month.	Rs. 2.50 per KW of sanctioned load p.m. subject to a minimum Rs. 10/- per installation month.
25 paise per unit for the first 300 units and 40 paise Per unit for the balance-	25 paise per uuit for the rst 250 units and 40 paise per unit for the rest.
Power:	
Rs. 2.50 per KW p.m. minimum Rs. 5/-	Rs. 2.50 per KW p.m. minimum Rs. 5/-
125 paise per unit for the first 50 units and 150 paise for the excess	140 paise per unit for first 50 units 175 paise for the excess
—	Rs. 2.50 per KW p.m. Minimum Rs. 5/- per installation p.m.
72 Paise per unit	100 paise per unit.
Schedule	
pumpsets	
Flat rate of Rs. 60/- per HP per annum.	
Flat rate of Rs. 75/- per HP per annum.	
At 22 paise per unit subject to a minimum of Rs 100/- per HP per annum.	
(b) Agricultural operation like Sugar Cane, Crushing, Chaff Cutting Coffee pupling, Cardamom drying etc. and Poultry Farm with sanction-load of 7.5 KW and below	
At 50 paise per unit for all units consumed during the month subject to a minimum of Rs. 20/- per KW of sanctoned load p.m.	

1	2	3	
			Energy Charges :
			Minimum Charges :
			Energy Charges :
LT-5	LT-5	Industrial Leating and Motive Power including Lighting.	
			Fixed Charges :
			Fixed Charges :
			Energy Charges :
			Fixed Charges :
			Energy Charges :
LT-6	LT-6	Street lights-public Lighting.	

4	5
(c) Water supply and sewarage pumping installationa : (i) Village and Town Panchayats At 25 paise per unit for all units consumed. Nil	
(ii) Water supply and Sewerage pumping installations of Municipalties/ Corporations / State Governments. At 35 paise per unit for all units consumed subject to a minimum of Rs. 12-00 per KW of sanctioned load per month.	
(a) Tiny Industries : Applicable to such industries as are certified to be 'TINY' Industries.	(a) Tiny Industries ; Fixed charges : At Rs. 6/- per HP of sanctioned load p.m. Plus Energy charge : At 65 paise per unit for all the units.
i) Located in a place with population of 10,000/ and below as per 1981 At Rs. 6/-per HP p.m. plus energy charges At 43paise per unit for all units.	
ii) Located in other places. Rs. 6/- per HP of snctd, load p.m. PLUS 52 paise per unit for all units consumed.	
(b) All other Industrial installations, Rs. 6/- per HP sancted. load per month PLUS 65 ps. per unit.	
(a) For st. lights 66 village & Town Panchayats Flat rate of Rs. 60/- per KW of connected load P m.	(a) For St. Light of villages & Town Pachayats : Flat rate of Rs. 100/- per KW of connected load p.m.

1	2	3
LT-7	LT-7	Temperary power supply Energy charges : Under LT.

REVISED RATE SCHEDULE :
WITH INSTALLATION OF CAPACITORS

(a) For Irrigation Pumpsets :

(i) Upto and inclusive of 5 HP Flat rate of Rs. 75/- per annum.

(ii) Above 5 HP and upto 10 HP (including 10 H) Flat rate of Rs. 100/- per HP per annum.

(iii) Above 10 HP At 30 paise per unit subject to a minimum of Rs. 100/- per HP per annum.

(b) Agricultural Operations like Sugar Cane Crushing Chaff cutting Coffee Cardamon drying etc. and poultry farm with sanctioned load of 7.5 KW and below.

WITH INSTALLATION OF CAPACITORS

At 55 paise per unit subject to a minimum of Rs. 50/- per HP of sanctioned load p.m.

(c) Water supply and Sewerage pumping installations:

(i) Village and Town Panchayats :

Energy charges : At 42 paise per unit for all the units consumed in the month.

(ii) Minicipalities/Corporations/State Government.

Energy charges : At 52 paise per unit for all the units consumed subject to a minimum of Rs. 15/- per KW of sanctioned load per month.

Note : The above tariffs excluder the rate of electricity

4	5
(b) For other st. lights :	(b) For other Street Lights.
Flat rate of Rs. 120/- per KW of connected load.	Flat rate of Rs. 175/- per KW of connected load or line Minimum, whichever in higher per month.
Rs. 1.50 per unit or Rs. 40/ per KW or part thereof of sanctioned load per week, whichever is higher.	At 190 paise per unit or Rs 40/- per KW or part thereof of sanctioned load per week whichever is higher.

WITHOUT INSTALLATION OF CAPACITORS

Flat rate of Rs. 90/- per HP per annum

Flat rate of Rs. 120/- per HP per annum

At 35 paise per unit subject to a minimum of Rs. 100/- per HP per annum.

WITHOUT INSTALLATION OF CAPACITORS

At 65 paise per unit subject to a minimum of Rs. 60/- per HP of sanctioned load per month.

SRI ROSHAN BAIG.—I would like to ask to what has K. E. B. done to reduce the heavy loss in transmissin ? Hon'ble minister on some occasion has stated that the average transmission loss in Karnataka is 22% What is the internationally accepted norm of transmission loss ? what is the Indian average of transmission loss ? ಕೆ. ಇ. ಬಿ. ಯವರಿಗೆ ಉಚಿತವಾಗಿ ಎಷ್ಟು ವಿದ್ಯುತ್ತನ್ನು ಸರಬರಾಜು ಮಾಡುತ್ತಿದ್ದೀರಿ ? ಅದಕ್ಕೆ ಈಗ ಏನಾದರೂ ಚಾರ್ಜ್ ಮಾಡುತ್ತಿದ್ದೀರಾ ?

ಶ್ರೀ ಜೆ. ಹೆಚ್. ಪಟೀಲ್.—ಇದಕ್ಕೆ ಅಂತರಾಷ್ಟ್ರೀಯ ಫಾರ್ಮುಲಾ ಎಂದು ಏನೂ ಇಲ್ಲ ಜಪಾನ್ ಮುಂತಾದ ದೇಶಗಳಲ್ಲಿ ೬ಕ್ಕಿಂತ ಕಡಿಮೆ ಟ್ರಾನ್ಸ್‌ಮಿಷನ್ ಲಾಸ್ ಇದೆ. ನಮ್ಮ ರಾಷ್ಟ್ರದಲ್ಲಿ ಆವರೇಜ್ ೨೧ ಪರ್ಸೆಂಟ್ ಟ್ರಾನ್ಸ್‌ಮಿಷನ್ ಲಾಸ್ ಇದೆ. ಬಿಹಾರದಂತ ಕಡೆ ೩೦ ಪರ್ಸೆಂಟ್ ಹೋಗ ಬಹುದು, ಹಿಮಾಚಲ ಪ್ರದೇಶದಲ್ಲಿ ೧೫ ಪರ್ಸೆಂಟ್ ಹೋಗಬಹುದು. ಆದರೆ ನ್ಯಾಷನಲ್ ಆವರೇಜ್ ೨೦.೫ ಅಥವಾ ೨೧ ಪರ್ಸೆಂಟ್ ಇದೆ. ನಮ್ಮ ರಾಜ್ಯದಲ್ಲಿ ೨೨ ಪರ್ಸೆಂಟ್ ಟ್ರಾನ್ಸ್‌ಮಿಷನ್ ಲಾಸ್ ಇದ್ದುದನ್ನು ೨೧.೫ ಕ್ಕೆ ಇಳಿಸಿದ್ದೇವೆ. ನಮ್ಮ ಗುರಿ ಪ್ರತಿ ವರ್ಷ ೧ ಪರ್ಸೆಂಟಾದರೂ ಟ್ರಾನ್ಸ್‌ಮಿಷನ್ ಲಾಸ್ ಕಡಿಮೆ ಮಾಡಬೇಕು ಎಂಬುದು ಆಗಿದೆ ಆದರೆ ಅದಕ್ಕೆ ಸಿಸ್ಟಮ್ ಇಂಪ್ರೂವೆಂಟ್‌ಗೆ ಕಾರ್ಯ ಕ್ರಮ ಹಾಕಬೇಕಾಗುತ್ತದೆ. ಸಿಸ್ಟಮ್ ಇಂಪ್ರೂವೆಂಟ್ ಆದರೆ ಟ್ರಾನ್ಸ್‌ಮಿಷನ್ ಲಾಸ್ ಕಡಿಮೆ ಯಾಗುತ್ತದೆ. ನಮ್ಮ ಜನರೇಟಿಂಗ್ ಸ್ಟೇಷನ್ ಪವರ್‌ನ್ ಫಾಟ್‌ನಲ್ಲಿದೆ. ಆದ್ದರಿಂದ ಅನಿವಾರ್ಯ ವಾಗಿ ಟ್ರಾನ್ಸ್‌ಮಿಷನ್ ಲಾಸ್ ಆಗುತ್ತದೆ. ಕೆಲವು ಸಿಸ್ಟಂ ಇಂಪ್ರೂವೆಂಟ್ ಮಾಡುವುದರಿಂದ ಅದನ್ನು ಉಳಿಸಬಹುದು, ಮತ್ತೊಂದು ಕೆ.ಇ.ಬಿ. ವರ್ಕರ್ಸ್‌ಗೆ ಫ್ರೀಯಾಗಿ ಏತಕ್ಕೆ ಎಲೆಕ್ಟ್ರಿಸಿಟಿ ಕೊಟ್ಟಿದ್ದೀರಿ ಎಂದು ಕೇಳಿದ್ದಾರೆ. ೨೦ ವರ್ಷಗಳ ಕೆಳಗೆ ಕೆ. ಇ. ಬಿ. ಕೆಲಸಗಾರರಿಗೂ(ಆಗ ಕೆ. ಇ. ಬಿ. ಎಂದು ಇರಲಿಲ್ಲ, ಬೇರೆ ಇತ್ತು)ಮತ್ತು ಸರ್ಕಾರಕ್ಕೂ ಆದಂಥ ಒಪ್ಪಂದ ಇರುವುದರಿಂದ ಕೊಡು ತ್ತಿದ್ದೇವೆ. ಅದನ್ನು ಈಗ ಕ್ಯಾನ್ಸಲ್ ಮಾಡುವ ಇಚ್ಛೆ ಇಲ್ಲ. ಆದರೆ ಬಹಳ ಕೊರತೆ ಇರುವುದರಿಂದ ಕೆ.ಇ.ಬಿ. ನೌಕರರಿಗೂ ೨೦೦ ಯೂನಿಟಿಗಿಂತ ಜಾಸ್ತಿ ಉಪಯೋಗ ಮಾಡಿದರೆ ನಾವು ಚಾರ್ಜ್ ಮಾಡುತ್ತೇವೆ.

ಸಾಗರ ತಾಲ್ಲೂಕಿನಲ್ಲಿ ವೃಕ್ಷ ಲಕ್ಷ ಆಂದೋಲನ

೭೦ (೧೪೨) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು ಳಸವಳ್ಳಿ ಸರ್ವೆ ನಂ. ೮೧ರಲ್ಲಿ ಎಂ.ಪಿ.ಎಂ. ಅರಣ್ಯ ವಿಭಾಗದವರು ನೆಡುತೋಪು ಮಾಡದಂತೆ ಅರಣ್ಯ ಸಚಿವರು ಆಜ್ಞೆ ನಂ. ಆ.ರಾ.ಮ(ಅ) ೫೯೯/೮೭ ೧೩-೭-೮೭ ರಂತೆ ಸಿ.ಸಿ.ಎಫ್. ಜನರಲ್‌ರವರಿಗೆ ಆದೇಶ ನೀಡಿರುವುದು ನಿಜವೇ ?

ಆ) ದಿನಾಂಕ ೧೦-೮-೮೭ರಂದು "ವೃಕ್ಷ ಲಕ್ಷ ಆಂದೋಲನ" ಸಮಿತಿಯವರು ನೆಡುತೋಪು ಮಾಡಲು ಅರಣ್ಯ ಅಧಿಕಾರಿಗಳು ಈ ಮೇಲ್ಕಂಡ ಸರ್ವೆ ನಂ. ೮೧ಕ್ಕೆ ಹೋದಾಗ ಅದನ್ನು ಪ್ರತಿಭಟಿಸಿ ಸತ್ಯಾಗ್ರಹ ಮಾಡಲು ಹೋದ ಸತ್ಯಾಗ್ರಹಿಗಳ ಮೇಲೆ ಅರಣ್ಯ ಅಧಿಕಾರಿಗಳು ಹಲ್ಲೆ ನಡೆಸಿ ಹೆಣ್ಣು ಮಕ್ಕಳ ಮೇಲೆ ಕೈ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ?

ಈ) ಇಂತಹ ಅಧಿಕಾರಿಗಳ ಮೇಲೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಜಿ. ಎಸ್. ಬಾಗಲಕೋಟಿ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಅರಣ್ಯ ಸಚಿವರ ಕಾರ್ಯಾಲಯದಿಂದ ಬಂದ ಪತ್ರ ಸಂಖ್ಯೆ ಅರಾಮ (ಅ) ೧೯೪/೮೭ ದಿನಾಂಕ ೧೨-೮-೮೭ರಲ್ಲಿ (೧೩-೭-೮೭ ಅಲ್ಲ) ಮಾನ್ಯ ಮಂತ್ರಿಗಳು ಕೂಡಲೇ ಗಿಡ ನೆಡುವುದನ್ನು ತಡೆಹಾಡಬೇಕು ಎಂದು ಆದೇಶಿಸಿರುವುದು ನಿಜ. ಅದರನ್ವಯ ನಿರ್ದೇಶಕರು (ಅರಣ್ಯ), ಮೈಸೂರು ಕಾಗದದ ಕಾರ್ಖಾನೆ ಇವರಿಗೆ ನೆಡುತೋಪುಗಳನ್ನು ಬೆಡುವುದನ್ನು ನಿಲ್ಲಿಸಲು ಈ ಕಛೇರಿಯಿಂದ ಆದೇಶಿಸ ಲಾಗಿದೆ. ಇನ್ನೂ ಗಿಡ ನೆಡುವ ತಡೆಯಾಜ್ಞೆ ಜಾರಿಯಲ್ಲಿದೆ.